


ಸೈಕಲ್ಲಿನಿಂದ ಹಿಡಿದು ಬೈಕು ಮೊಬೈಲ್‌ವರೆಗೆ. ಸತ್ಯಪ್ಪ ಕೊಟ್ಟಿದ್ದು ಮಕ್ಕಳ ಶಾಲೆಯ ಫೀಸನ್ನಷ್ಟೇ. ಅವರೆಲ್ಲರ ಆಡಂಬರದ ಬದುಕಿನ ಮಧ್ಯೆ ಕೇವಲ ಒಬ್ಬ ಗುಮಾಸ್ತನಾಗಿ ತನ್ನ ಗಾಂಧೀತತ್ವಗಳೊಂದಿಗೆ ಮೂಲೆಗುಂಪಾದ.

ಹೌದು, ಅವನ ಸತ್ಯವ್ರತ ಉದ್ಯೋಗದಲ್ಲೂ ಎಲ್ಲರ ಟೀಕೆಗೆ ಗುರಿಯಾಯಿತು. “ಎಲ್ಲಪ್ಪಾ... ನಿಮ್ಮ ಗಾಂಧಿ ಬಂದ್ನಾ?” ಎನ್ನುವ ಕುಹಕಗಳು ಹಿಂದೆಯೇ ಕೇಳಿಸುತ್ತಿದ್ದವು. ಎಲ್ಲ ಉಪೇಕ್ಷಿಸಿದವ ತನ್ನ ದಾರಿಯಲ್ಲೇ ಮುಂದುವರೆದ. ಎಲ್ಲ ಕ್ಷೇತ್ರಗಳಲ್ಲಿರುವಂತೆ ಇಲ್ಲೂ ಗುಟ್ಟಿನ ವ್ಯವಹಾರಗಳಿದ್ದವು. ಗೋಲ್‌ಮಾಲ್ ನಡೆಯುತ್ತಿತ್ತು. ಸತ್ಯನಿಗೆ ಗೊತ್ತಾದರೆ ಅವಕ್ಕೆ ಮುಕ್ತಿಯೇ. ಅದಕ್ಕೇ ಎಲ್ಲರೂ ಎತ್ತಂಗಡಿ ಮಾಡಿಸಿ ಅವನನ್ನು ನಿವಾರಿಸಿಕೊಳ್ಳಲು ನೋಡುತ್ತಿದ್ದರು. ಹೀಗಾಗಿ ಅವನು ಬಾಗಲಕೋಟೆ, ಅಥಣಿ, ತಿಪಟೂರು, ಕೋಲಾರ ಅಂತೆಲ್ಲ ಕರ್ನಾಟಕದ ಮೂಲೆಮೂಲೆಗಳನ್ನು ಸುತ್ತುತ್ತಲೇ ಆಫೀಸರನಾದ. ಬಸುರಿ, ಬಾಣಂತಿ, ಎಳೆಯ ಮಕ್ಕಳು ಎಂದೆಲ್ಲ ಮಗಳನ್ನು ಕಳಿಸಲೇ ಇಲ್ಲ ಕೇಶವರೆಡ್ಡಿ. ಮುಂದೆ ಮಕ್ಕಳ ವಿದ್ಯಾಭ್ಯಾಸದ ನೆಪವಿತ್ತು. ಸತ್ಯಪ್ಪ ಲೋನ್ ಮಾಡಿ ಬೆಂಗಳೂರಲ್ಲೇ ಮನೆ ಕಟ್ಟಿಸಿದಾಗ ಲಕ್ಷ್ಮಿ ಮಕ್ಕಳೊಂದಿಗೆ ಸ್ಥಾಯಿಯಾದಳು. ಕಾಲಲ್ಲಿ ನಾಯಿಗೆರೆಗಳಿರುವಂತೆ ಸತ್ಯ ಸುತ್ತುತ್ತಲೇ ಇದ್ದ. ದಾರಿಗಳು.. ದರ್ಶನ ಬೇರೆಯಾದವು. ಮೌಲ್ಯಗಳು ಬದಲಾದವು. ಜಗತ್ತುಗಳೇ ಭಿನ್ನವಾಗಿಬಿಟ್ಟವು.

ಸಂಸಾರದ ಬಗ್ಗೆ ತಲೆಕೆಡಿಸಿಕೊಳ್ಳದೇ ಸತ್ಯ ಆತ್ಮಸಂಯಮ ಸಾಧಿಸಿ ಬ್ರಹ್ಮಚರ್ಯವನ್ನು ಪಾಲಿಸಿದ. ಹೋದಲ್ಲೆಲ್ಲ ಗಾಂಧೀವಾದ ಮಂಡಿಸಿ ಸಂಘಗಳನ್ನು ಕಟ್ಟಿದ. ಭಜನೆಗಳು ನಡೆದವು. ಬಡವರನ್ನು, ಹರಿಜನರನ್ನು ಮೇಲಕ್ಕೆತ್ತಲು

